ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಮನೆ ಖರೀದಿಸಲು ಸರ್ಕಾರಿ ನೌಕರರಿಗೆ ''ಗೃಹ ಖರೀದಿ ಮುಂಗಡ ಹಣ'' ವನ್ನು ಕೂಡಲೇ ಮಂಜೂರು ಮಾಡುವುದು

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಜೂರಾದ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಮನೆಗಳನ್ನು ಸರ್ಕಾರಿ ನೌಕರರಿಗೆ ಅವರವರ ಕಛೇರಿಗಳಿಂದ ಮನೆ ಖರೀದಿ ಮುಂಗಡ ಹಣವನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ, ಮಂಜೂರಾದ ಗೃಹದ ಮೌಲ್ಯಕ್ಕಿಂತ ಕಡಿಮೆ ''ಮನೆ ಖರೀದಿ ಮುಂಗಡ ಹಣ'' ಪಡೆಯುವಂತಹ ಪ್ರಕರಣಗಳಲ್ಲಿ ನೌಕರರಿಗೆ ಕೂಡಲೇ ಗೃಹ ಮೌಲ್ಯದ ಹಣವನ್ನು ಮಂಜೂರು ಮಾಡಲಾಗುತ್ತಿದೆಯೇ ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಈ) ಸರ್ಕಾರಿ ನೌಕರರ ತೊಂದರೆಯನ್ನು ತಪ್ಪಿಸಲು ಕರ್ನಾಟಕ ಗೃಹ ನಿರ್ಮಾಣ ಮಂಡಲಿಯವರು ಮಂಜೂರು ಮಾಡುವ ಆದೇಶದ ಪತ್ರದ ಮೇರೆಗೆ ನೌಕರರಿಗೆ ಗೃಹದ ಮೌಲ್ಯದ ಪೂರ್ಣ ಹಣವನ್ನು ಕೂಡಲೇ ಮಂಜೂರು ಮಾಡಲು ಕ್ರಮವನ್ನು ಸರ್ಕಾರದವರು ತಕ್ಷಣ ಕೈಗೊಳ್ಳುವರೇ ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯ ಮಂತ್ರಿಯವರು).—

ಅ) ನಿಯಮಗಳನುಸಾರವಾಗಿ ಮನೆ ಕಟ್ಟುವ ಅಥವಾ ಮನೆ ಕೊಳ್ಳುವ ಸಲುವಾಗಿ ಮಂಜೂರು ಮಾಡಲಾಗುವ ಮುಂಗಡ ಹಣದಿಂದ ಸರ್ಕಾರಿ ನೌಕರರಿಗೆ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಮನೆಗಳನ್ನು ಕೊಳ್ಳಲು ಮುಂಗಡ ಹಣವನ್ನು ಆಧ್ಯತೆಯ ಮೇಲೆ ಮಂಜೂರು ಮಾಡಲು ಅವಕಾಶ ಉಂಟು.

ಆ) ಇಲ್ಲ.

ಇ) ಸರ್ಕಾರಿ ನೌಕರರಿಗೆ ಮನೆ ಖರೀದಿ ಅಥವಾ ಮನೆ ಕಟ್ಟಲು ಅವರ ಆರು ತಿಂಗಳ ಮೂಲ ವೇತನದಷ್ಟು (ಒಂದು ಲಕ್ಷ ರೂಪಾಯಿಗೆ ವಿಸ್ತಾರದಂತೆ) ಮುಂಗಡ ಹಣವನ್ನು ನಿಯಮಗಳ ಪ್ರಕಾರ ಮಂಜೂರು ಮಾಡಲು ಅವಕಾಶವುಂಟು. ಇದಕ್ಕಿಂತ ಹೆಚ್ಚು ಹಣವನ್ನು ಸರ್ಕಾರ ಮಂಜೂರು ಮಾಡಲು ನಿಯಮದಲ್ಲಿ ಅವಕಾಶವಿಲ್ಲ.

ಈ) ನಿಯಮಗಳ ಪ್ರಕಾರ ನೌಕರರಿಗೆ ಆರು ತಿಂಗಳ ಮೂಲ ವೇತನದಷ್ಟು (ಒಂದು ಲಕ್ಷ ರೂಪಾಯಿಗೆ ವಿಸ್ತಾರದಂತೆ) ಮುಂಗಡ ಹಣವನ್ನು ಮಂಜೂರು ಮಾಡಲಾಗುತ್ತಿದೆ. ಕರ್ನಾಟಕ ಗೃಹ ನಿರ್ಮಾಣ ಮಂಡಲಿಯಿಂದ ಕೊಳ್ಳಬಹುದಾದ ಮನೆಗಳ ಮೌಲ್ಯದ ಮೊತ್ತವು ನಿಯಮದ ಪ್ರಕಾರ ಮಂಜೂರು ಮಾಡಲಾಗುವ ಮುಂಗಡ ಹಣಕ್ಕಿಂತ ಹೆಚ್ಚಾಗಿದ್ದಲ್ಲಿ, ಆ ಹೆಚ್ಚಿನ ಮೊತ್ತವನ್ನು ಸರ್ಕಾರವು ಮಂಜೂರು ಮಾಡಲು ನಿಯಮದಲ್ಲಿ ಅವಕಾಶವಿಲ್ಲ.

ಧಾರವಾಡ ಜಿಲ್ಲಾ ಸರಕಾರಿ ಆಸ್ಪತ್ರೆಯ ಬಗ್ಗೆ

ಶ್ರೀ ಚಂದ್ರಕಾಂತ ಬೆಲ್ಲದ(ಧಾರವಾಡ).— ಮಾನ್ಯ ಆರೋಗ್ಯ ಮತ್ತು ಅಟ್ಟಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡದ ಜಿಲ್ಲಾ ಸರ್ಕಾರಿ ಸಾರ್ವಜನಿಕ ದವಾಖಾನೆ ಒಂದುನೂರು ಸಾಲ್ಕು ವರ್ಷ ಕಳೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಅದರ ಶತಮಾನೋತ್ಸವದ ಆಚರಣೆ ಮಾಡುವ ಯೋಜನೆ ಯಾವ ಹಂತದಲ್ಲಿ ಇದೆ ?

ಅ) ಕರ್ನಾಟಕದಲ್ಲಿಯು ಜಿಲ್ಲಾ ಸರ್ಕಾರಿ ಸಾರ್ವಜನಿಕ ದವಾಖಾನೆಗಳಲ್ಲಿ ೨೫೦ ಹಾಸಿಗೆಗಳನ್ನು ಪಡೆಯದೆ ಇರುವ ದವಾಖಾನೆಗಳು ಎಷ್ಟು, ಧಾರವಾಡದ ಜಿಲ್ಲಾ ಸರ್ಕಾರಿ ದವಾಖಾನೆಗೆ ೨೫೦ ಹಾಸಿಗೆ ಯೋಜನೆ ಸರ್ಕಾರದವರ ಪರಿಗಣಿಸಿದೆಯೆ ?

ಇ) ಹಾಗಿದ್ದಲ್ಲಿ ಸದರಿ ಸೌಲಭ್ಯಗಳನ್ನು ಯಾವಾಗ ನೀಡಲಾಗುವುದು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು),—

ಅ) ಬಂದಿದೆ. ೧೯೮೭ರ ಏಪ್ರಿಲ್‌ನಲ್ಲಿ ನಡೆಸಲಾಗುವುದು.

ಆ) ಮೂರು ಇದೆ.

ಇ) ಹಣಕಾಸು ಪರಿಸ್ಥಿತಿಯನ್ನು ಗಮನಿಸಿ ನೀಡಲಾಗುವುದು.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಜನಾಂಗದವರಿಗೆ ಅಬ್ಕಾರಿ ಹರಾಜಿನಲ್ಲಿ ವಿಶೇಷ ಸಲಾತಿಯಂ ಮೇರೆಗೆ ಗುತ್ತಿಗೆ ನೀಡುವ ಬಗ್ಗೆ

೪೪೫. ಶ್ರೀ ಕುಶಾಲ (ಸಂಕ್ಲ).—ಮಾನ್ಯ ಆರೋಗ್ಯ ಮಂತ್ರಿ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೩ ರಿಂದ ಅಬಕಾರಿ ಇಲಾಖೆಯ ಅಬಕಾರಿ ಹರಾಜಿನಲ್ಲಿ ಪರಿಶಿಷ್ಟ ಜಾತಿ ಜನಾಂಗದವರಿಗೆ ವಿಶೇಷ ಸಲಾತಿಯಂತೆ ಹರಾಜು ಗುತ್ತಿಗೆ ನೀಡುತ್ತೇವೆ ಎಂದು ಹೇಳಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಪರಿಶಿಷ್ಟ ಜಾತಿ ಜನಾಂಗದ ಎಷ್ಟು ಅಬಕಾರಿ ಜನರಿಗೆ ಗುತ್ತಿಗೆ ನೀಡಲಾಗಿದೆ ?

ಇ) ಹಾಗೆ ನೀಡದಿದ್ದಕ್ಕೆ ಕಾರಣಗಳೇನು ? ಹಾಗೆ ಯಾವಾಗ ನೀಡಲಾಗುವುದು?

ಶ್ರೀ ಎಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—

ಅ) ಇಲ್ಲ

ಆ) ಉತ್ತರ 'ಅ' ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉತ್ತರ 'ಅ' ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ

ದಾವಣಗೆರೆ ನಗರದಲ್ಲಿ ಟೆಲಿ ಪ್ರಿಂಟರ್ ವ್ಯವಸ್ಥೆ ಮಾಡಿಂವ ಬಗ್ಗೆ

೬೩೨. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದಲ್ಲಿ ಟೆಲಿಪ್ರಿಂಟರ್ ವ್ಯವಸ್ಥೆ ಮಾಡಬೇಕೆಂಬ ಕೋರಿಕೆ ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಒದಗಿಸಲಾಗುವುದು ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು

ಆ) ದಾವಣಗೆರೆಗೆ ಟೆಲಿಪ್ರಿಂಟರ್ ಸೌಲಭ್ಯವನ್ನು ಸದ್ಯಕ್ಕೆ ಒದಗಿಸಲು ಸಾಧ್ಯವಾಗುವುದಿಲ್ಲ.